## ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.

**ಪಿಡಬ್ಲ್ಯೂ:12**

**ಸ್ಪೆಶಲ್ ಕೇಸ್ ಸಂಖ್ಯೆ 510/23** **ಸಿಡಬ್ಲ್ಯೂ:33**

**ಸಾಕ್ಷಿದಾರರ ಹೆಸರು** : ಹರೀಶ್ ಆರ್

**ತಂದೆ ಹೆಸರು** : ರಾಮ ನಾಯ್ಕ

**ವಯಸ್ಸು** : 38

**ವೃತ್ತಿ** : ಪೋಲೀಸು ಉಪ ನಿರೀಕ್ಷಕರು ಡಿ ಎಸ್ ಪಿ

**ವಾಸ** : ಉಡುಪಿ

**ದಿನಾಂಕ: 11-05-2026** ಸಾಕ್ಷಿದಾರರು ವಿಸಿ ಮುಖಾಂತರ ನೊಡಲ್ ಆಫೀಸರ್ ಆದ ಶ್ರೀಮತಿ ಆಶಾಲತಾ ಕೋಂ: ಪ್ರಕಾಶ್, 44 ವರ್ಷ, 110 ಪೋಲೀಸು ಮಹಿಳಾ ಮುಖ್ಯ ಪೇದೆ, ಡಿ ಎಸ್ ಪಿ ಕಚೇರಿ ಉಡುಪಿ ರವರ ಸಮಕ್ಷಮ ಹಾಜರಾಗಿದ್ದು, ಸದ್ರಿ ಸಾಕ್ಷಿಯ ಪಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನಾನು ಗಂಗೊಳ್ಳಿ ಪೋಲೀಸು ಠಾಣೆಯಲ್ಲಿ 19-06-2023 ರಿಂದ 19-06-2025 ರ ವರೆಗೆ ಪೋಲೀಸು ಉಪ ನಿರೀಕ್ಷಕನಾಗಿ ಸೇವೆ ಸಲ್ಲಿಸಿರುತ್ತೇನೆ.

ದಿನಾಂಕ:21-09-2023 ರಂದು ಕುಂದಾಪುರ ಪೋಲೀಸು ಠಾಣೆಯಿಂದ ನಮ್ಮ ಠಾಣೆಗೆ ಬಂದ ಇಮೇಲ್ ಸಂದೇಶವನ್ನು ಸ್ವೀಕರಿಸಿಕೊಂಡು ಅದರಂತೆ ನಾನು ಬೆಳಿಗ್ಗೆ 11.00 ಗಂಟೆಗೆ ಕುಂದಾಪುರ ಸರಕಾರಿ ಆಸ್ಪತ್ರೆಗೆ ಭೇಟಿ ಕೊಟ್ಟು ಅಲ್ಲಿ ಒಳರೋಗಿಯಾಗಿ ದಾಖಲಾಗಿದ್ದ ಸುರೇಶ್ ರವರನ್ನು ವಿಚಾರಣೆ ಮಾಡಿ ಅವನು ನೀಡಿದ ಲಿಖಿತ ಫಿರ್ಯಾದಿ ಪಡೆದುಕೊಂಡು ನಂತರ ಅದನ್ನು ನಮ್ಮ ಠಾಣಾ ಅಪರಾಧ ಕ್ರಮ ಸಂಖ್ಯೆ 96/2023 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿ ತಯಾರಿಸಿ ಅದನ್ನು ನಮ್ಮ ಮೇಲಾಧಿಕಾರಿಯವರಿಗೆ ಮತ್ತು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ

ಫಿರ್ಯಾದಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಸಾಕ್ಷಿ ಪ್ರಥಮ ವರ್ತಮಾನ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ-24 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-24 ಎ ಎಂದು ಗುರುತಿಸಲಾಯಿತು. ನಂತರ ಪ್ರಕರಣವನ್ನು ನಮ್ಮ ಮೇಲಾಧಿಕಾರಿಯವರಿಗೆ ವಹಿಸಿಕೊಟ್ಟಿರುತ್ತೇನೆ.

ದಿನಾಂಕಃ21-09-2023 ರಂದು ಪ್ರಕರಣದ ಆರೋಪಿತರನ್ನು ವಶಕ್ಕೆ ಪಡೆದು ತನ್ನ ಮುಂದೆ ಹಾಜರುಪಡಿಸಿಸುವಂತೆ ಪೋಲೀಸು ಉಪಾಧೀಕ್ಷಕರು ನನಗೆ ಜ್ಞಾಪನ ನೀಡಿರುತ್ತಾರೆ. ಸದ್ರಿ ಜ್ಞಾಪನವನ್ನು ಸ್ವೀಕರಿಸಿಕೊಂಡಿರುತ್ತೇನೆ. ಸಾಕ್ಷಿ ಸದ್ರಿ ಜ್ಞಾಪನ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-25 ಎಂದು ಗುರುತಿಸಲಾಯಿತು.

ಈ ಪ್ರಕರಣದ 7 ನೇ ಆರೋಪಿ ಬೈಂದೂರು ಯಡ್ತರೆ ಗ್ರಾಮದ ಜಂಕ್ಷನ್ ಬಳಿ ಇರುವುದಾಗಿ ಮಾಹಿತಿ ಬಂದಂತೆ ನಾನು ಸಿಬ್ಬಂದಿಯವರೊಂದಿಗೆ ಸದ್ರಿ ಸ್ಥಳಕ್ಕೆ ಹೋದಾಗ ನಮ್ಮ ಸಿಬ್ಬಂದಿಯವರು ಆತನನ್ನು ಗುರುತಿಸಿ ಆತನ ಹೆಸರು ವಿಳಾಸ ಕೇಳಿ ಆತನು ಈ ಪ್ರಕರಣದ ಆರೋಪಿ ಎಂದು ಖಾತ್ರಿಪಡಿಸಿಕೊಂಡು ಆತನನ್ನು ವಶಕ್ಕೆ ಪಡೆದುಕೊಂಡು ಅದೇ ದಿನ ಬೆಳಿಗ್ಗೆ 8.15 ಗಂಟೆಗೆ ವರದಿಯೊಂದಿಗೆ ನಮ್ಮ ಮೇಲಾಧಿಕಾರಿಯವರ ಮುಂದೆ ಹಾಜರುಪಡಿಸಿರುತ್ತೇನೆ. ಸಾಕ್ಷಿ ಸದ್ರಿ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ-26 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-26 ಎ ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದಿರುವ 7 ನೇ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ</u> <u>1 ರಿಂದ 7 ನೇ ಆರೋಪಿತರ ಪರ ಶ್ರೀ ಕೆ ಪಿ ಕೆ ಎಸ್ ರವರಿಂದ</u>

ನಾನು ಆಸ್ಪತ್ರೆಗೆ ಭೇಟಿ ಕೊಡುವ ಪೂರ್ವದಲ್ಲೇ ಫಿರ್ಯಾದಿದಾರ ಲಿಖಿತ ಫಿರ್ಯಾದಿ ಬರೆದಿಟ್ಟಿದ್ದ. ಸದ್ರಿ ಫಿರ್ಯಾದಿಯನ್ನು ಯಾರು ಬರೆದಿದ್ದಾರೆ ಮತ್ತು ಅದರಲ್ಲಿದ್ದ ಹಸ್ತಾಕ್ಷರ ಯಾರಿಗೆ ಸಂಬಂಧಪಟ್ಟಿದ್ದು ಎನ್ನುವ ಬಗ್ಗೆ ನಾನು ವಿಚಾರಣೆ ಮಾಡಿಲ್ಲ. ಫಿರ್ಯಾದಿದಾರ ನನ್ನ ಸಮಕ್ಷಮ ನಿಪಿ-1 ರಂತೆ ಫಿರ್ಯಾದಿ ನೀಡಿಲ್ಲ ಎಂದರೆ ಸರಿ ಅಲ್ಲಾ. ದಲಿತ ಸಂಘದವರ ಒತ್ತಡಕ್ಕೆ ಮಣಿದು ಆರೋಪಿತರ ವಿರುದ್ಧ ಸುಳ್ಳು ಫಿರ್ಯಾದಿ ಪಡೆದುಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ ಅಲ್ಲಾ. ನನ್ನ ಮೇಲಾಧಿಕಾರಿ ಚಾಸಾ.38 ರವರು ನಿಪಿ-25 ರಂತೆ ನನಗೆ ಯಾವುದೇ ಜ್ಞಾಪನ ಪತ್ರ ನೀಡಿಲ್ಲ ಎಂದರೆ ಸರಿ ಅಲ್ಲಾ. ನಾನು ಹೇಳಿದಂತೆ 7 ನೇ ಆರೋಪಿತನನ್ನು ನಾನು ಹೇಳಿದ ದಿನ, ಸಮಯ ಮತ್ತು

ಸ್ಥಳದಲ್ಲಿ ವಶಕ್ಕೆ ಪಡೆದುಕೊಂಡಿಲ್ಲ ಮತ್ತು ಆತನನ್ನು ತನಿಖಾಧಿಕಾರಿ ಮುಂದೆ ವರದಿಯೊಂದಿಗೆ ಹಾಜರುಪಡಿಸಿಲ್ಲ ಎಂದರೆ ಸರಿ ಅಲ್ಲಾ. ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕುಂದಾಪುರ